# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 504 |
| ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯವು ಸ್ವಾವಲಂಬಿಯಾಗದ್ದರೂ ಸಹ ಇತರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಗ್ರಾಹಕರಿಗೆ ವಿಧಿಸುತ್ತಿರುವ ವಿದ್ಯುತ್ ದರಗಳು ಬಹಳ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿದ್ಯುತ್ ದರವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ವಿದ್ಯುತ್ ದರವನ್ನು ಹೆಚ್ಚಿಸಲು ಕಾರಣವಾಗುವ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:<br>1. ವಿದ್ಯುತ್ ಬೇಡಿಕೆಯನ್ನು ಪೂರೈಸಲು ಹೊಸ ಉತ್ಪಾದನಾ ಕೇಂದ್ರ ಹಾಗೂ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸಬೇಕಾಗಿರುವುದರಿಂದ ವಿದ್ಯುತ್ ಖರೀದಿಯ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಆದುದರಿಂದ ಜಕಾತಿ ಹೆಚ್ಚಳವು ಅನಿವಾರ್ಯವಾಗಿದೆ.<br>2. ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳಿಂದಾಗಿ ವಿದ್ಯುತ್ ಸರಬರಾಜು ಕಂಪನಿಗಳು ಉತ್ಪಾದನಾ ಕೇಂದ್ರಗಳಿಗೆ ಪ್ರತಿ ತಿಂಗಳು ನಿಗದಿತ ವೆಚ್ಚವನ್ನು ಭರಿಸಬೇಕಾಗುತ್ತದೆ.<br>3. ಇದಲ್ಲದೆ, ನೌಕರರ ಸಂಬಳದ ಪರಿಷ್ಕರಣೆ, ಕಾರ್ಯ ಮತ್ತು ನಿರ್ವಹಣಾ ವೆಚ್ಚ, ಬಂಡವಾಳ ವೆಚ್ಚ ಮತ್ತು ಕಾರ್ಯನಿರತ ಬಂಡವಾಳಕ್ಕಾಗಿ ಸಾಲಗಳ ಮೇಲಿನ ಬಡ್ಡಿ ವೆಚ್ಚಗಳು ಜಕಾತಿ ಪರಿಷ್ಕರಣೆಯಲ್ಲಿ ಒಳಗೊಂಡಿರುತ್ತದೆ.<br>4. ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ಮಾರಾಟದಿಂದ ಬರುತ್ತಿರುವ ವ್ಯತ್ಯಾಸವು ಹೆಚ್ಚಾಗುತ್ತಿದ್ದು, ವಿದ್ಯುತ್ ದರ ಏರಿಕೆಯು ಅನಿವಾರ್ಯವಾಗಿರುತ್ತದೆ.<br><br>ಇ.ಹೆಚ್.ಟಿ./ಹೆಚ್.ಟಿ. ಗ್ರಾಹಕರ ವಿದ್ಯುಚ್ಛಕ್ತಿ ಬಳಕೆಯನ್ನು ಉತ್ತೇಜಿಸಲು, ಆಯೋಗವು HT-2(a)(i), HT-2(a)(ii), HT-2(b)(i), HT-2(b)(ii), HT-2(c)(i), HT-2(c)(ii) ಹೆಚ್.ಟಿ.ಗ್ರಾಹಕರಿಗೆ ಸರಾಸರಿ ಮಾಸಿಕ ಬಳಕೆಗಿಂತ ಹೆಚ್ಚುವರಿ ಮಾಸಿಕ ಬಳಕೆಗೆ ಪ್ರತಿ ಯೂನಿಟ್ಟಿಗೆ ರೂ.6/- ದರದಲ್ಲಿ ರಿಯಾಯಿತಿಯನ್ನು, ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆ (DERS- Discounted Rate Energy Scheme) ಯಡಿಯಲ್ಲಿ ನೀಡಲಾಗುತ್ತಿದೆ.<br><br>ಇ.ಹೆಚ್.ಟಿ./ಹೆಚ್.ಟಿ.ಗ್ರಾಹಕರನ್ನು ವಿದ್ಯುತ್ ಜಾಲಕ್ಕೆ ತರಲು, ಆಯೋಗವು HT-(1), HT-2(a), HT-2(b), and HT-2(c) ಹಾಗೂ ಈ ಜಕಾತಿಗಳ ಉಪವರ್ಗಗಳ ಹೆಚ್.ಟಿ.ಗ್ರಾಹಕರಿಗೆ 10.00 ಗಂಟೆಯಿಂದ 18.00 ಗಂಟೆಗಳ ಸಮಯದಲ್ಲಿ ಮೂಲ ಬಳಕೆ ಯೂನಿಟ್ ಗಳಿಗಿಂತ ಮೇಲ್ಪಟ್ಟು ವಿದ್ಯುಚ್ಛಕ್ತಿಯ ಪ್ರತಿ ಬಳಕೆಯ ಯೂನಿಟ್ ಗೆ ರೂ.1/- ರಂತೆ ರಿಯಾಯಿತಿ ಮತ್ತು ರಾತ್ರಿ 22.00 ಗಂಟೆಯಿಂದ ಬೆಳಿಗ್ಗೆ 06.00 ಗಂಟೆಯ ಅವಧಿಯಲ್ಲಿನ ಬಳಕೆಗೆ ರೂ.2/- ರಂತೆ (ಸಮಯಾಧಾರಿತ ವಿದ್ಯುತ್(TOD) ಅನ್ವಯವಾಗುವ ತಿಂಗಳುಗಳಿಗೆ ಮಾತ್ರ) ವಿಶೇಷ ಪ್ರೋತ್ಸಾಹ ಯೋಜನೆಯಡಿಯಲ್ಲಿ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. |

...2

Scanned with CamScanner

| | | |
|---|---|---|
| | | ಕೋವಿಡ್-19 ರ ದುಷ್ಪರಿಣಾಮಗಳಿಂದಾಗಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ತಗ್ಗಿಸಲು, ಸರ್ಕಾರವು ಪ್ರಮಾಣೀಕರಿಸಿದಂತೆ LT-5(a) ಮತ್ತು LT-5(b) ವರ್ಗಕ್ಕೆ 12 ತಿಂಗಳ ಅವಧಿಗೆ ಬಳಸುವ ವಿದ್ಯುತ್ತಿಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್ ಗೆ 50 ಪೈಸೆ ರಿಯಾಯಿತಿ ನೀಡಲಾಗುತ್ತಿದೆ.<br>ದರ ನಿಗದಿಪಡಿಸುವ ಅಧಿಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. |
| ಆ) | ರಾಜ್ಯ ಸರ್ಕಾರವು 2018-19ನೇ ಸಾಲಿನಿಂದ ಇಲ್ಲಿಯವರೆಗೆ ಮಾರಾಟ ಮಾಡಿರುವ ವಿದ್ಯುತ್ ಪ್ರಮಾಣವೆಷ್ಟು; ವಿದ್ಯುತ್ ಖರೀದಿಸಲು ಸರ್ಕಾರ ಮಾಡಿರುವ ವೆಚ್ಚವೆಷ್ಟು; ವಿದ್ಯುತ್ ಮಾರಾಟ ಮತ್ತು ಖರೀದಿಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ಲಾಭ-ನಷ್ಟದ ಸಂಪೂರ್ಣ ಮಾಹಿತಿ ನೀಡುವುದು; | ರಾಜ್ಯವು ಪ್ರಸ್ತುತ ಹೆಚ್ಚುವರಿ ವಿದ್ಯುತ್ತನ್ನು ವಿವಿಧ ವಿನಿಮಯ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿದ್ದು, ಅವಶ್ಯಕತೆ ಇದ್ದಲ್ಲಿ ತುರ್ತು ಸಂದರ್ಭದಲ್ಲಿ ಖರೀದಿ ಮಾಡಲಾಗುತ್ತದೆ.<br>2018-19ನೇ ಸಾಲಿನಿಂದ ಈವರೆಗೂ ಮಾಡಿದ ವಿದ್ಯುತ್ ಮಾರಾಟ ಮತ್ತು ಖರೀದಿ ಹಾಗೂ ವೆಚ್ಚದ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ.<br>ಪಿ.ಸಿ.ಕೆ.ಎಲ್. ಎಲ್ಲಾ ಎಸ್ಕಾಂಗಳ ಪರವಾಗಿ ಬೇಡಿಕೆ ಪೂರೈಸಿದ ನಂತರ ಹೆಚ್ಚುವರಿ ವಿದ್ಯುತ್ತನ್ನು ವಿದ್ಯುತ್ ವಿನಿಮಯ ಕೇಂದ್ರಗಳಲ್ಲಿ 2018-19 ರಿಂದ ಮಾರಾಟ ಮಾಡಲಾಗಿರುತ್ತದೆ ಮತ್ತು ಕೆಲವೊಂದು ವಿತರಣಾ ಕಂಪನಿಗಳಿಗೆ ನವೀಕರಿಸಬಹುದಾದ ಇಂಧನ ಬಾಧ್ಯತೆ ಯನ್ನು ಪೂರೈಸಲು ಹಸಿರು ಇಂಧನವನ್ನು ಮಾರಾಟ ಮಾಡಲಾಗಿರುತ್ತದೆ.<br>ಹೆಚ್ಚುವರಿ ವಿದ್ಯುತ್ (Surplus) ಮಾರಾಟದಿಂದ ಈ ಕೆಳಗಿನ ಅನುಕೂಲಗಳನ್ನು ರಾಜ್ಯದ ಎಲ್ಲಾ ಎಸ್ಕಾಂಗಳು ಪಡೆದುಕೊಂಡಿರುತ್ತದೆ.<br>• 2018-19 ರಿಂದ 14.02.2023 ರವರೆಗೆ ಒಟ್ಟು ರಾಜ್ಯದ ಇಂಧನ ಬಳಕೆಯು 362434 ಮಿ.ಯೂನಿಟ್‌ಗಳಾಗಿದ್ದು ಮತ್ತು ರಾಜ್ಯವು ಹೆಚ್ಚುವರಿ ವಿದ್ಯುತ್ ನ್ನು ಜೂನ್ 2018 ರಿಂದ 14.02.2023 ರವರೆಗೆ ಒಟ್ಟು 14430.19 ಮಿ.ಯೂನಿಟ್ ಮಾರಾಟ ಮಾಡಲಾಗಿರುತ್ತದೆ.<br>• ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ ಕೋಡ್ 8.5.8 ಮತ್ತು ಸಂಬಂಧಿತ ವಿಷಯಗಳ ನಿಬಂಧನೆಗಳು, 2014 ರ ಅನ್ವಯ ಕಾಲಕಾಲಕ್ಕೆ ಅವುಗಳ ತಿದ್ದುಪಡಿಗಳ ಪ್ರಕಾರ +/- 250 MW ವಿಚಲನ ಮಿತಿಯನ್ನು ನಿರ್ವಹಿಸುವ ಸಲುವಾಗಿ ಕೆಲವೊಮ್ಮೆ ಲಭ್ಯವಿರುವ ಹೆಚ್ಚಿನ ವಿದ್ಯುತ್ತನ್ನು ಕಡಿಮೆ ದರದಲ್ಲಿ ಮಾರಾಟ ಮಾಡಬೇಕಾಗಿರುತ್ತದೆ.<br>• ಉಷ್ಣ ವಿದ್ಯುತ್ ಸ್ಥಾವರಗಳಿಗೆ ನಿಗದಿತ ವೆಚ್ಚವನ್ನು ನೀಡಬೇಕಾಗಿರುತ್ತದೆ.<br>ಹೆಚ್ಚುವರಿ ವಿದ್ಯುತ್ತನ್ನು ಮಾರಾಟ ಮಾಡಿರುವುದರಿಂದ ನಿಗದಿತ ವೆಚ್ಚದಲ್ಲಿ ಉಳಿತಾಯ ಮಾಡಲಾಗಿದೆ. |
| ಇ) | 2018-19ನೇ ಸಾಲಿನಿಂದ ಇಲ್ಲಿಯವರೆಗ ಕೆ.ಆರ್.ಇ.ಡಿ.ಎಲ್. ಸಂಸ್ಥೆ ಕ್ಷೇತ್ರವಾರು ನಿರ್ವಹಿಸಿರುವ ಕಾಮಗಾರಿಗಳೆಷ್ಟು? (ಸಂಪೂರ್ಣ ವಿವರ ನೀಡುವುದು) | ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನಗಳ ಉತ್ತೇಜನಕ್ಕಾಗಿ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಕ್ಷೇತ್ರವಾರು ಕಾಮಗಾರಿಗಳನ್ನು ಕೈಗೆತ್ತಿಗೊಂಡಿರುವುದಿಲ್ಲ. |

...3

Scanned with CamScanner

| | |
|---|---|
| | ಆದರೆ, ಕೆ.ಆರ್.ಇ.ಡಿ.ಎಲ್ ಸಂಸ್ಥೆಯು 2018-19ನೇ ಸಾಲಿನಿಂದ ಇಲ್ಲಿಯವರೆಗೆ ಸ್ಥಾಪನೆಗೊಂಡಿರುವ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ.<br><br>1. ಸೌರ ವಿದ್ಯುತ್ ಯೋಜನೆಗಳು.<br>ಕೆ.ಆರ್.ಇ.ಡಿ.ಎಲ್ ನಿಯಮಿತವು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 50 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕವನ್ನು ಸ್ಥಾಪಿಸಿದೆ.<br>2. ಪವನ ವಿದ್ಯುತ್ ಯೋಜನೆಗಳು:<br>ಕೆಆರ್ಇಡಿಎಲ್ ವತಿಯಿಂದ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಸೋಗಿ ಗ್ರಾಮದಲ್ಲಿ 4.2 ಮೆ.ವ್ಯಾ (2 Nos. x 2.1 MW) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ದಿನಾಂಕ: 20-05-2020 ರಂದು ಅನುಷ್ಠಾನಗೊಳಿಸಲಾಗಿರುತ್ತದೆ.<br><br>3. ಸೌರಶಕ್ತಿ ಆಧಾರಿತ ಜಾಲಮುಕ್ತ ಸೌರ ಪಂಪ್‌ಸೆಟ್ ಗಳ ಅಳವಡಿಕೆ:<br>ನೀರಾವರಿ ಪಂಪ್‌ಸೆಟ್ (Stand alone) ಅಳವಡಿಸುವ ಯೋಜನೆಯನ್ನು ಸರ್ಕಾರದಿಂದ 2014-15ನೇ ಸಾಲಿನಿಂದ ಜಾರಿಗೊಳಿಸಿದ್ದು, ಎಂ.ಎನ್.ಆರ್.ಇ. (ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ) ರವರ ಸಹಾಯಧನ, ರಾಜ್ಯ ಸರ್ಕಾರದ ಸಹಾಯ ಧನದೊಂದಿಗೆ ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಂದ ಪ್ರತಿಪಂಪ್ ಸೆಟ್‌ಗೆ ರೂ.1 ಲಕ್ಷ ವಂತಿಗೆ ಯೊಂದಿಗೆ ಹಾಗೂ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ಉಚಿತವಾಗಿ ರಾಜ್ಯಾದ್ಯಂತ ಅಳವಡಿಸಲಾಗಿದ್ದು, 2018-19 ಮತ್ತು 2019-20 ನೇ ಸಾಲಿನವರೆಗೆ 2435 ಸೌರಪಂಪ್ ಸೆಟ್ ಗಳನ್ನು ಅಳವಡಿಸಲಾಗಿರುತ್ತದೆ (ಸಾಮಾನ್ಯವರ್ಗ: 2032 ಸಂಖ್ಯೆ, ಪರಿಶಿಷ್ಟಜಾತಿ: 269 ಸಂಖ್ಯೆ, ಪರಿಶಿಷ್ಟ ಪಂಗಡ: 134 ಸಂಖ್ಯೆ)<br><br>ಮುಂದುವರೆದು PM-KUSUM (Pradhan Mantri Kisan Urja Suraksha evam Utthaan Mahabhiyaan) Component B ಯೋಜನೆಯಡಿ 2021-22 ರಿಂದ 2021-22ರವರೆಗೆ 319 (ಪರಿಶಿಷ್ಟಜಾತಿ: 227 ಸಂಖ್ಯೆ, ಪರಿಶಿಷ್ಟ ಪಂಗಡ: 92 ಸಂಖ್ಯೆ) SC/ST ಫಲಾನುಭವಿಗಳ ತೆರೆದ ಬಾವಿ/ಕೊಳವೆ ಬಾವಿಗಳಿಗೆ 3HP/7.5HP ಸಾಮರ್ಥ್ಯದ ಸೌರ ಪಂಪ್‌ಸೆಟ್‌ಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>4. ಅಂಗನವಾಡಿ ಕೇಂದ್ರಗಳಿಗೆ ಸೌರವಿದ್ಯುತ್ ಸೌಲಭ್ಯ:<br>ರಾಜ್ಯದಲ್ಲಿ ಒಟ್ಟು 2052 ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಶಾಲೆಗಳಿಗೆ ತಡೆರಹಿತ ವಿದ್ಯುತ್ ನ್ನು ಪೂರೈಸುವ ಸಲುವಾಗಿ ಸೌರ ಘಟಕಗಳನ್ನು ಅಳವಡಿಸಲಾಗಿದೆ. |

ಸಂಖ್ಯೆ: ಎನರ್ಜಿ 52 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

Scanned with CamScanner

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 504 ಕ್ಕೆ ಅನುಬಂಧ

2018-19 ನೇ ಸಾಲಿನಿಂದ ಈವರೆಗೂ ರಾಜ್ಯ ಸರ್ಕಾರ ಮಾಡಿರುವ ವಿದ್ಯುತ್ ಮಾರಾಟ ಮತ್ತು ಖರೀದಿ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿವೆ.

| ವಿವರಗಳು | ವಿದ್ಯುತ್ ಪ್ರಮಾಣ (ಮಿಲಿಯನ್ ಯುನಿಟ್‌ಗಳಲ್ಲಿ) | ಸರಾಸರಿ ದರ ಪ್ರತಿಯೂನಿಟ್ ಗೆ (ರೂ.ಗಳಲ್ಲಿ) | ಮೊತ್ತ (ಕೋಟಿಗಳಲ್ಲಿ) ಒಪನ್ ಆಕ್ಸಿಸ್‌ನ್ನು ಒಳಗೊಂಡಿದೆ |
|---|---|---|---|
| **2018-19** | | | |
| ವಿದ್ಯುತ್ ಮಾರಾಟ | 803.54 | 4.22 | 339.48 |
| ವಿದ್ಯುತ್ ಖರೀದಿ | 966.09 | 4.08 | 394.17 |
| **2019-20** | | | |
| ವಿದ್ಯುತ್ ಮಾರಾಟ | 1510.59 | 2.63 | 397.10 |
| ವಿದ್ಯುತ್ ಖರೀದಿ | ಇಲ್ಲ | | |
| **2020-21** | | | |
| ವಿದ್ಯುತ್ ಮಾರಾಟ | 1626.90 | 2.96 | 549.20 |
| ವಿದ್ಯುತ್ ಖರೀದಿ (ತಾತ್ಕಾಲಿಕ ವಿದ್ಯುತ್ ಕೊರತೆಯನ್ನು ಪೂರೈಸಲು) | 4.83 | 4.94 | 2.38 |
| **2021-22** | | | |
| ವಿದ್ಯುತ್ ಮಾರಾಟ | 6577.56 | 4.31 | 2837.10 |
| ವಿದ್ಯುತ್ ಖರೀದಿ<br>ಐಇಎಕ್ಸ್ ಮತ್ತು ಪಿ.ಎಕ್ಸ್‌ಐಎಲ್ ಮುಖಾಂತರ ಫೆಬ್ರವರಿ ಮತ್ತು ಮಾರ್ಚ್–2022 ರ ಮಾಹೆಯಲ್ಲಿ ಅಸಾಂಪ್ರದಾಯಕ ಮೂಲಗಳಿಂದ ವಿದ್ಯುತ್ ಖರೀದಿಸಿದ 466.13 MU ಗಳನ್ನು ಹೆಚ್ಚುವರಿ ಅಸಾಂಪ್ರದಾಯಕ ಮೂಲಗಳಿಂದ ವಿದ್ಯುತ್‌ನ್ನು ಬೇರೆ ಯುಟಿಲಿಟಿಯವರ ಆರ್.ಪಿ.ಒ. ಆಬ್ಲೀಗೇಷನ್ ನ್ನು ಮೀಟ್ ಮಾಡಲು ಮಾರಾಟ ಮಾಡಲಾಗಿದೆ.<br>36.51 MU – ಆಪ್ಟಿಮೈಶೇಷನ್ (Optimization) / ತಾತ್ಕಾಲಿಕ ವಿದ್ಯುತ್ ಕೊರತೆಯನ್ನು ಪೂರೈಸಲು | 502.64 | 4.23 | 212.53 |
| ಒಟ್ಟು ವಿದ್ಯುತ್ ಮಾರಾಟ | 6074.92 | 4.32 | 2624.57 |
| **2022-23 (31 ಡಿಸೆಂಬರ್-2022 ರವರೆಗೆ)** | | | |
| ವಿವರಗಳು | ವಿದ್ಯುತ್ ಪ್ರಮಾಣ (ಮಿಲಿಯನ್ ಯುನಿಟ್‌ಗಳಲ್ಲಿ ) | ಸರಾಸರಿ ದರ ಪ್ರತಿಯೂನಿಟ್ ಗೆ (ರೂ.ಗಳಲ್ಲಿ) | ಮೊತ್ತ (ಕೋಟಿಗಳಲ್ಲಿ) ಒಪನ್ ಆಕ್ಸಿಸ್‌ನ್ನು ಒಳಗೊಂಡಿದೆ |
| ವಿದ್ಯುತ್ ಮಾರಾಟ | 4315.61 | 5.78 | 2495.72 |
| ವಿದ್ಯುತ್ ಖರೀದಿ | 316.86 | 8.23 | 260.84 |